ಬಿಜಾಪುರ-ಬಾಗಲಕೋಟೆ : ಡಿಸೆಂಬರ್ 2004

ಬಾಗಲಕೋಟೆ-ಗದಗ : ಡಿಸೆಂಬರ್2005

ಉ. ದಿನಾಂಕ : 18.3.2003 ರವರೆಗೆ 152.50 ಕೋಟಿ ರೂಪಾಯಿಗಳು ವೆಚ್ಚವಾಗಿರುತ್ತದೆ. ಬಾಕಿ ಕಾಮಗಾರಿಯನ್ನು ಪೂರ್ತಿಗೊಳಿಸಲು ರೂ. 123.40 ಕೋಟಿ ರೂಗಳ ಅವಶ್ಯವಿದೆ.

ಊ. ಕೇಂದ್ರ ಸರ್ಕಾರವು ರೂ. 150.50 ಕೋಟಿ ಗಳನ್ನು ಹಾಗೂ ರಾಜ್ಯ ಸರ್ಕಾರವು ರೂ. 2.00 ಕೋಟಿಗಳ ವೆಚ್ಚವನ್ನು ಈವರೆವಿಗೆ ಮಾಡಿದೆ. ಮುಂದೆ ಕೇಂದ್ರ ಸರ್ಕಾರವು 2003 04ನೇ ಸಾಲಿನಲ್ಲಿ ರೂ. 10.00 ಕೋಟಿ ಬಿಡುಗಡೆ ಮಾಡುತ್ತದೆ. ರಾಜ್ಯ ಸರ್ಕಾರವು ಅದಕ್ಕೆ ಸಮನಾದ ಮೊತ್ತವನ್ನು ಬಿಡುಗಡೆ ಮಾಡುವುದು.

ಬಿಜಾಪುರ ಜಿಲ್ಲೆ ಝಳಕಿ ಗ್ರಾಮದಲ್ಲಿ ನಡೆದ ಗೋಲಿಬಾರಿನ ನ್ಯಾಯಾಂಗ ತನಿಕೆ

1932(2164) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಿಜಾಪುರ ಜಿಲ್ಲೆ ಝಳಕಿಯಲ್ಲಿ ಗೋಲಿಬಾರ್ ಘಟನೆ ಯಾವಾಗ ಸಂಭವಿಸಿತು;

ಆ. ಗೋಲಿಬಾರ್ ಘಟನೆ ನಡೆದಿರುವುದಕ್ಕೆ ಕಾರಣ ಏನು, ಗೋಲಿಬಾರ್ ಘಟನೆಯಿಂದ ಸಂಭವಿಸಿದ ಸಾವು ನೋವಿನ ಘಟನೆಗಳೆಷ್ಟು;

ಇ. ಗೋಲಿಬಾರಿನ ವಿಷಯವನ್ನು ಕಳೆದ ಬಾರಿ ವಿಧಾನ ಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದಾಗ ಸರ್ಕಾರ ನ್ಯಾಯಂಗ ತನಿಖೆಗೆ ಆದೇಶಿಸಿರುವುದೆ, ಹಾಗಿದ್ದರೆ ತನಿಖೆಯನ್ನು ಆರಂಭಿಸಲಾಗಿದೆಯೇ;

ಈ. ಸರ್ಕಾರ ತನಿಖೆ ನೆಡೆಸಿ ವರದಿ ಸಲ್ಲಿಸುವುದಕ್ಕೆ ಹಾಕಿಕೊಂಡಿದ್ದ ಕಾಲಮಿತಿ ಏನು;

ಉ. ನಿಗದಿತ ಕಾಲಮಿತಿಯಂತೆ ತನಿಖೆಯಿಂದ ಸರ್ಕಾರಕ್ಕೆ ನ್ಯಾಯಾಂಗ ಒದಗಿಸಿರುವ ವರದಿ ಏನು;

ಊ. ವರದಿಯಂತೆ ಸರ್ಕಾರ, ಏನು ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ದಿನಾಂಕ 4.7.2002ರಂದು ಸಂಭವಿಸಿತು.

ಆ. ಪೋಲೀಸ್ ಗೋಲಿಬಾರ್‌ನಲ್ಲಿ 4 ಜನರು ಸಾವಿಗೀಡಾಗಿದ್ದಾರೆ.

ಇ. ಹೌದು, ನ್ಯಾಯಾಮೂರ್ತಿ ಏನ್. ಸುಬ್ಬಾರಾವ್, ಕೌಟುಂಬಿಕ ನ್ಯಾಯಾಲಯ, ಬಿಜಾಪುರ ಅವರ ನೇತೃತ್ವದಲ್ಲಿ ಅಧಿಸೂಚನೆ ಸಂಖ್ಯೆ: ಒಇ 33 ಪಿಸಿಇ 2002, ದಿನಾಂಕ 26.7.2002ರಲ್ಲಿ ವಿಚಾರಣಾ ಆಯೋಗವನ್ನು ರಚಿಸಲಾಗಿದೆ.

ಈ. 6 ತಿಂಗಳು

ಉ. ವಿಚಾರಣೆಯು ಪ್ರಗತಿಯ ಹಂತದಲ್ಲಿದೆ.

ಊ. ಉದ್ಭವಿಸುವುದಿಲ್ಲ.

ಭಾಲ್ಕಿ ತಾಲ್ಲೂಕಿನಲ್ಲಿ ಕೊಲೆ ಪ್ರಕರಣದ ತನಿಖೆ

1934(1978) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಭಾಲ್ಕಿ ತಾಲ್ಲೂಕಿನಲ್ಲಿ ದಿನಾಂಕ: 10.5.2002ರಂದು ನಡೆದ ಕೊಲೆ ಪ್ರಕರಣದಲ್ಲಿನ ಎಲ್ಲಾ ಆರೋಪಿಗಳನ್ನು ಬಂಧಿಸಲಾಗಿದೆಯೆ; ಬಂಧಿಸದಿದ್ದರೆ, ಕಾರಣಗಳೇನು ಮತ್ತು ಬಂಧಿಸಲು ತೆಗೆದುಕೊಂಡ ಕ್ರಮಗಳೇನು;

ಆ. ಈ ಪ್ರಕರಣದ ತನಿಖೆ ಯಾವ ಹಂತದಲ್ಲಿದೆ;

ಇ. ಆರೋಪ ಪತ್ರ (Charge Sheet) ದಾಖಲಿಸಲಾಗಿದೆಯೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. 5 ಆರೋಪಿಗಳ ಪೈಕಿ ಮೂವರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇಬ್ಬರು ತಲೆ ಮರೆಸಿಕೊಂಡಿರುತ್ತಾರೆ. ಅವರನ್ನು ಪತ್ತೆ ಹಚ್ಚುವ ಕಾರ್ಯಮುಂದುವರೆದಿದೆ.

ಆ. ಪ್ರಕರಣದ ತನಿಖೆ ಕೊನೆಯ ಹಂತದಲ್ಲಿದೆ.

ಇ. ತಲೆಮರೆಸಿಕೊಂಡಿರುವ ಆರೋಪಿಗಳನ್ನು ಪತ್ತೆ ಹಚ್ಚಿ ದಸ್ತಗಿರಿ ಮಾಡಿದ ನಂತರ ದೋಷಾರೋಪಣ ಪತ್ರ ಸಲ್ಲಿಸಲಾಗುವುದು.

ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ

1935(2280) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಸಲುವಾಗಿ ರೂ.6.03 ಕೋಟಿ ಹಣ ಮಂಜೂರಾತಿಯಾಗಿದ್ದರೂ ಇದುವರೆಗೂ ಕಾಮಗಾರಿಯನ್ನು ಪ್ರಾರಂಭಿಸದಿರಲು ಕಾರಣವೇನು?

ಆ. ಸದರಿ ಯೋಜನೆಗೆ ಟೆಂಡರ್ ಕರೆಯಲಾಗಿದೆಯೇ? ಈ ಯೋಜನೆಗೆ ಕಾಲಮಿತಿಯನ್ನು ನಿಗಧಿಪಡಿಸಲಾಗಿದೆಯೇ?

ಇ. ಈ ವರ್ಷ ಭಾಲ್ಕಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಈ ಸಮಸ್ಯೆಗೆ ಯಾವ ಪರಿಹಾರ ಕಲ್ಪಿಸಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು ರೂ. 603.20 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರವು ದಿನಾಂಕ:29.11.2001 ರಲ್ಲಿ ನೀಡಿದ್ದು ಯೋಜನೆಯನ್ನು ತಾಂತ್ರಿಕವಾಗಿ ಮತ್ತೊಮ್ಮೆ ಪರಿಶೀಲಿಸಿ ಮಾರ್ಪಾಡು ಮಾಡಿ ಸದರಿ ಯೋಜನೆಗೆ ತಾಂತ್ರಿಕ ಮಂಜೂರಾತಿಯನ್ನು ಮಂಡಳಿಯಿಂದ ದಿನಾಂಕ: 29.1.2003ರಲ್ಲಿ ನೀಡಲಾಗಿರುತ್ತದೆ. ಯೋಜನೆಯ ಕೆಲವು ಮಾರ್ಪಾಡಿನಿಂದ, ಕೆಲಸ ಪ್ರಾರಂಭಿಸಲು ವಿಳಂಬ ಉಂಟಾಗಿರುತ್ತದೆ.

ಆ. ಸದರಿ ಯೋಜನೆಯ ಪ್ರಮುಖ ಕಾಮಗಾರಿಗಳಿಗೆ ಪ್ಯಾಕೇಜ್ ಟೆಂಡರ್ ಪ್ರಕಟಣೆಯನ್ನು ಈಗಾಗಲೇ ದಿನಾಂಕ: 1.2.2003ರಲ್ಲಿ ಕರೆಯಲಾಗಿದ್ದು ಸಧ್ಯದಲ್ಲಿ ಗುತ್ತಿಗೆದಾರರನ್ನು